**AS – 016**

## IV ನೇ ಸೆಮಿಸ್ಟರ್ ಬಿ.ಎಸ್‌ಸಿ. ಪರೀಕ್ಷೆ, ಏಪ್ರಿಲ್/ಮೇ 2012
## (ಫ್ರೆಶರ್ಸ್) (2011 – 12 & Onwards Scheme)
## ಕನ್ನಡ ಭಾಷಾ ಪತ್ರಿಕೆ - IV
## ಸಾಹಿತ್ಯ ಸಲ್ಲಾಪ - ೨

Time : 3 Hours Max. Marks : 90

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

ಮೊಲೆ ಬಿದ್ದು ಮುಡಿ ಸಡಿಲಿ ಗಲ್ಲ ಬತ್ತಿ ತೋಳು ಕುಂದಿದವಳ
ಎನ್ನನೇಕೆ ನೋಡುವಿರಿ ಎಲೆ ಅಣ್ಣಗಳಿರಾ
ಕುಲವಳಿದು ಛಲವಳಿದು ಭವಗೆಟ್ಟು ಭಕ್ತೆಯಾದವಳ
ಎನ್ನನೇಕೆ ನೋಡುವಿರಿ ಎಲೆ ತಂದೆಗಳಿರಾ
ಚನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದು ಛಲವಳಿದವಳು.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×2=4)**

ನಾಗಚಂದ್ರ, ವಚನಗಳು, ಎನ್.ಕೆ. ಹನುಮಂತಯ್ಯ.

II. ಅ) ಇವುಗಳಲ್ಲಿ ಐದು ಪದಗಳಿಗೆ ಮೂಲರೂಪ ಬರೆಯಿರಿ : **(1×5=5)**

ದನಿ, ಸಗ್ಗ, ಅಕ್ಕರ, ಕ್ವಾಟಿ, ಸೂದ್ರ, ಮುಚ್ಚೆ, ಮೇಗೆ

ಆ) ಇವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ : **(1×5=5)**

ನಯನ, ಧಾತ್ರಿ, ಸುತ, ಅರಿ, ತೊತ್ತು, ತನುಜ, ನಗ

ಇ) ಇವುಗಳಲ್ಲಿ ಐದು ಪದಗಳನ್ನು ಬಿಡಿಸಿ ಬರೆಯಿರಿ : **(1×5=5)**

ಬೆಂಕಿಯುಂಡೆ, ಕೇಡಿಲ್ಲದ, ಗೋವಿನಂತಾಗಿ, ಬಂದಾಡಿತ್ತು, ದುಡಿದುಣ್ಣಲು, ಜೋಗತಿಯೊಬ್ಬಳು, ಮುದ್ರಣಾಲಯ.

ಈ) ನಗೆಗೇಡಿ, ಕವಲುದಾರಿ – ಇದೇ ರೀತಿಯ ಐದು ಪದಗಳನ್ನು ಸ್ವಂತವಾಗಿ ರಚಿಸಿ. **(1×5=5)**

**P.T.O.**

www.onlinebu.com

www.onlinebu.com

III. ಇವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (4×5=20)

1) ಜಾನಕಿಯನ್ನು ನೋಡಿದ ನಾರದನ ಮನಃಸ್ಥಿತಿ ಎಂತಹುದು ? ಅದರ ಪರಿಣಾಮವೇನಾಯಿತು ?

2) ಚನ್ನಮಲ್ಲಿಕಾರ್ಜುನನಲ್ಲದ 'ಗಂಡ'ರು ಪರಗಂಡರು ಎಂದು ಹೇಳುವಲ್ಲಿ ಇರುವ ಲೋಕದ ಬದುಕಿನ ನಿರಾಕರಣೆ ಯಾವ ಬಗೆಯದು ?

3) ಮೊದಲ ವಿಶ್ವಪರಿಸರ ಸಮ್ಮೇಳನದ ಆಶಯಗಳನ್ನು ವಿವರಿಸಿ.

4) ಹೆಣ್ಣು ಮತ್ತು ಗಂಡಿನ ಭಾಷೆಯ ವಿಭಿನ್ನ ನೆಲೆಗಳನ್ನು ವಿವರಿಸಿ.

5) ರಾಜ ಒಡೆಯನು ವಿಕ್ರಮರಾಯನನ್ನು ಕೆಣಕಿದ್ದು ಏಕೆ ? ಪರಿಣಾಮವೇನಾಯಿತು ?

6) ಮಾಯಣ್ಣನಿಗೆ ಎದುರಾದ ಸಮಸ್ಯೆಗಳು ಯಾವುವು ? ಅವುಗಳನ್ನು ಆತನು ಹೇಗೆ ಬಗೆಹರಿಸಿಕೊಂಡನು ?

IV. ನಾಲ್ಕು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (10×4=40)

1) ಜಾನಕಿಯನ್ನು ಅವಮಾನಿಸಬೇಕೆಂದು ಹೊರಟ ನಾರದನ ಮನಸ್ಸಿನ ತುಮುಲಗಳನ್ನು ವಿವರಿಸಿ.

ಅಥವಾ

"ಗೋವು ತಿಂದು ಗೋವಿನಂತಾದವನು" – ಕವಿತೆಯ ಆಶಯಗಳನ್ನು ಬರೆಯಿರಿ.

2) ಪ್ರಸ್ತುತ ನಾವು ನಿಸರ್ಗವನ್ನು ಕಾಣುವ ನೆಲೆಯಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಪರಿಚಯ ಮಾಡಿಕೊಡಿ.

ಅಥವಾ

ಡಾ. ಸ.ಜ. ನಾಗಲೋಟಿ ಮಠ ಅವರ ಜೀವನದಲ್ಲಿನ ಸ್ವಾರಸ್ಯಕರ ಘಟನೆಗಳನ್ನು ಸಂಗ್ರಹಿಸಿ ಬರೆಯಿರಿ.

3) ಮಂಜುಗಣ್ಣಿನ ಮಾಯಣ್ಣ ಯಾರು ? ಆತನ ಸಮಯ ಪ್ರಜ್ಞೆಯ ಸನ್ನಿವೇಶಗಳನ್ನು ಸಂಗ್ರಹಿಸಿ ಬರೆಯಿರಿ.

ಅಥವಾ

ಸಬೀಹ ಭೂಮಿಗೌಡ ಅವರ 'ಸಂಬಂಧ' ಕತೆಯಲ್ಲಿ ಮೂಡಿ ಬಂದಿರುವ ಮಾನವೀಯತೆಯನ್ನು ವಿವರಿಸಿ.

4) "ನಮಗೆ ಗೊಂಬೆಗಳನ್ನು ದಾರಕಟ್ಟಿ ಆಡಿಸೋರು ಬೇಕು" – ವಿಕ್ರಮರಾಯನ ಈ ಮಾತನ್ನು ಇಂದಿನ ರಾಜಕಾರಣದೊಂದಿಗೆ ಚರ್ಚಿಸಿ.

ಅಥವಾ

"ಘಟನೆಗಳ ನಡುವೆ ಇರುವ ಸಂಬಂಧವೇ ಚರಿತ್ರೆ" – ಈ ಮಾತನ್ನು "ಹುತ್ತವ ಬಡಿದರೆ" ನಾಟಕದ ಹಿನ್ನಲೆಯಲ್ಲಿ ವಿವರಿಸಿ.

———————

www.onlinebu.com

www.onlinebu.com 1
http://www.onlinebu.com